**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ.31/2024**

**ಚಾ.ಸಾಃ 3, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ಶಶಿಧರ ನಾಗಪ್ಪ ಹರಿಕಂತ್ರ |
| ತಂದೆಯ ಹೆಸರು | ನಾಗಪ್ಪ ಹರಿಕಂತ್ರ |
| ವಯಸ್ಸು | 24 ವರ್ಷಗಳು |
| ಉದ್ಯೋಗ | ಮೀನುಗಾರಿಕೆ |
| ವಾಸ್ತವ್ಯ | ಹಳದೀಪುರ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 06-06-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 14-11-2023 ರಂದು ಬೆಳಿಗ್ಗೆ 11-00 ರಿಂದ 12-00 ಗಂಟೆ ಸಮಯದಲ್ಲಿ ಕರ್ಕಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯ ರೈಲ್ವೆ ಸ್ಟೇಶನ್ ಕ್ರಾಸನಲ್ಲಿ ಅಪಘಾತ ಆದ ವಿಚಾರವಾಗಿ ಪೋಲಿಸರು ಸ್ಥಳ ಪಂಚನಾಮೆಗೆ ಬಂದಿದ್ದು ಚಾಸಾ-1 ರವರು ತೋರಿಸಿದ ಅಪಘಾತದ ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ನಕಾಶೆ ತಯಾರಿಸಿರುತ್ತಾರೆ ಮತ್ತು ಸ್ಥಳದಲ್ಲಿ ಮೂರು ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಗಿದೆ.

ತದನಂತರ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಅಪಘಾತಕ್ಕೊಳಗಾದ ಕಾರು ಮತ್ತು ಬೈಕು ಇದ್ದು ಚಾಸಾ-1 ರವರು ಅವುಗಳನ್ನು ಗುರುತಿಸಿದ್ದು ಪೋಲಿಸರು ಅವುಗಳನ್ನು ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಾಕ್ಷಿ ಸಹಿ ಹಾಕಿದ್ದು, ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-8 ರಿಂದ 11 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಚಾಸಾ-1 ನನ್ನ ಸ್ನೇಹಿತ. ಆತ ನನ್ನನ್ನು ಸ್ಥಳಕ್ಕೆ ಬರುವಂತೆ ಕರೆದಿರುತ್ತಾನೆ. ಪೋಲೀಸರು ಬಂದಾಗ ಬೆಳಿಗ್ಗೆ 11-00 ರಿಂದ 12-00 ಗಂಟೆ ಆಗಿತ್ತು. ಆ ದಿನ ಮೊದಲು ಪೋಲೀಸ್ ಠಾಣೆಗೆ ಹೋಗಿದ್ದು ಅಲ್ಲಿಂದಲೇ ಸ್ಥಳಕ್ಕೆ ಬಂದಿರುತ್ತೇನೆ. ಅಪಘಾತ ಸ್ಥಳದಲ್ಲಿ ರಕ್ತ ಬಿದ್ದ ಕಲೆ ಇತ್ತು. ರಕ್ತದ ಕಲೆಯು

ಕುಮಟಾದಿಂದ ಹೊನ್ನಾವರಕ್ಕೆ ಬರುವ ರಸ್ತೆಯ ಎಡ ಅಂಚಿನಿಂದ ಸುಮಾರು 20 ಅಡಿ ರಸ್ತೆಯ ಒಳಭಾಗದಲ್ಲಿ ಇತ್ತು. ಪಂಚನಾಮೆಯನ್ನು ಇದೇ ರೀತಿ ಬರೆಯಬೇಕು ಎಂದು ನಾನು ಮಾಹಿತಿ ನೀಡಿರುವುದಿಲ್ಲ. ಸ್ಥಳ ಪಂಚನಾಮೆಯಲ್ಲಿ ಚಕ್‌ಬಂದಿಯನ್ನು ಬರೆದಿದ್ದಾರೋ ಇಲ್ಲವೋ ನಾನು ಓದಿ ನೋಡಲಿಲ್ಲ. ಪೋಲೀಸರು ನನ್ನ ಸಮಕ್ಷಮ ಬೈಕಿನ ಇಂಡಿಕೇಟರ್ ಅಥವಾ ಗ್ಲಾಸಿನ ಪೀಸುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸ್ಥಳದಲ್ಲಿ ಗಾಜಿನ ಚೂರುಗಳು ಬಿದ್ದಿದ್ದವು. ಗಾಜಿನ ಚೂರುಗಳನ್ನು ನಾನು ಪೋಲೀಸರಿಗೆ ತೋರಿಸಿಲ್ಲ. ಪೋಲೀಸರು ಪಂಚನಾಮೆಯನ್ನು ಓದಿ ಹೇಳಿದ್ದಾರೆ, ಈಗ ನೆನಪಿಲ್ಲ. ಅಪಘಾತ ಸ್ಥಳದಲ್ಲಿ ಪೂರ್ವ ದಿಕ್ಕಿಗೆ ಇಂತಹದ್ದೇ ಇದೆ ಎಂದು ನಾನು ಪಂಚನಾಮೆಯಲ್ಲಿ ಹೇಳಿ ಬರೆಸಿಲ್ಲ. ಸಾಕ್ಷಿ ನುಡಿಯುವ ಪೂರ್ವದಲ್ಲಿ ನಾನು ಪಂಚನಾಮೆಯನ್ನು ಓದಿಲ್ಲ. ಪಂಚನಾಮೆಗೆ ನಾನು, ಚಾಸಾ–1 ಮತ್ತು 2 ಸಹಿ ಹಾಕಿದ್ದೇವೆ. ಚಾಸಾ–2 ನನ್ನ ಸ್ನೇಹಿತ. ಚಾಸಾ–1 ರವರು ಆತನಿಗೂ ಫೋನ್ ಮಾಡಿ ಕರೆಸಿಕೊಂಡಿರುತ್ತಾರೆ.

ಅಮಾನತ್ತು ಪಂಚನಾಮೆಗೆ ಮಾಹಿತಿಯನ್ನು ಚಾಸಾ–1 ರವರು ನೀಡಿದ್ದಾರೆ. ಸದರಿ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ನನಗೆ ಮಾಹಿತಿ ಇಲ್ಲ. ಎರಡೂ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಒಂದು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ, ಇನ್ನೊಂದು ಪಂಚನಾಮೆಗೆ ಸ್ಥಳದಲ್ಲಿ ಸಹಿ ಮಾಡಿದ್ದೇನೆ. ಸ್ಥಳ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ನೆನಪಿಲ್ಲ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**